[Govt. of Karnataka C.R.P. 67]

| |
|---|
| **Deposition Sheets (RP.No.57) Form No.4 (Civil)** |

**IN THE COURT OF <u>CIVIL JUDGE & J.M.F.C., KARKALA.</u>**

**Criminal Case No. 339/2023**

**....................................................Vs....................................**

ಪಿ.ಡಬ್ಲ್ಯು : 8 ಸಿ.ಡಬ್ಲ್ಯು : 15

ಸಾಕ್ಷಿದಾರಳ ಹೆಸರು : ಲಕ್ಷ್ಮಿ

ಗಂಡನ ಹೆಸರು : ಪ್ರಕಾಶ್

ಪ್ರಾಯ : 28 ವರ್ಷ

ಉದ್ಯೋಗ : ಪೊಲೀಸ್ ಪೇದೆ

ವಾಸ : ಕಾರ್ಕಳ

ದಿನಾಂಕ 17.12.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭಿಯೋಜಕರು:-</u>

ನಾನು ಕಾರ್ಕಳ ನಗರ ಪೋಲಿಸ್ ಠಾಣೆಯಲ್ಲಿ 2020 ರಿಂದ ಪೋಲಿಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ತಕ್ಷೀರು ಸ್ಥಳ ಮಹಜರು ಹಾಗೂ ಆರೋಪಿ ತೋರಿಸಿಕೊಟ್ಟಂತೆ ಘಟನ ಸ್ಥಳ ಹಾಗೂ ಸ್ವತ್ತು ಸ್ವಾಧೀನತಾ ಮಹಜರು ಸಮಯದಲ್ಲಿ ಹಾಜರಿದ್ದು ನನ್ನ ಮೊಬೈಲ್ ಮೂಲಕ ಭಾವಚಿತ್ರ ತೆಗೆದ ಬಗ್ಗೆ ಕಲಂ 65(ಬಿ) ಭಾರತೀಯ ಸಾಕ್ಷ್ಯ ಅಧಿನಿಯಮದಡಿ ಪ್ರಮಾಣಪತ್ರವನ್ನು ನೀಡಿರುತ್ತೇನೆ. ಸಾಕ್ಷಿಯು ಸದ್ರಿ ಪ್ರಮಾಣಪತ್ರದಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದ್ರಿ ಪ್ರಮಾಣಪತ್ರವನ್ನು ನಿಪಿ-11 ಎಂದು ಸಾಕ್ಷಿಯ ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು: ಆರೋಪಿ ಪರ: ಶ್ರೀ ಎ ಎಸ್ ಎಂ ವಕೀಲರಿಂದ:</u>

3. ಭಾವಚಿತ್ರ ತೆಗೆಯಲು ನಮ್ಮ ಬಳಿ ಡಿಜಿಟಲ್ ಕ್ಯಾಮೇರಾ ಇರುವುದಿಲ್ಲ. ನನ್ನ ಮೊಬೈಲ್ ನಲ್ಲಿ ಭಾವಚಿತ್ರಗಳನ್ನು ತೆಗೆದಿರುತ್ತೇನೆ. ನನ್ನ ಮೊಬೈಲ್ ನ್ನು ಬೇರೆಯವರಿಗೆ

ನೀಡಿ ಭಾವಚಿತ್ರಗಳನ್ನು ಪ್ರಿಂಟ್ ಮಾಡಲಾಗಿರುತ್ತದೆ. ನಾನು ಭಾವಚಿತ್ರಗಳನ್ನು ನನ್ನ ಮೊಬೈಲ್ ನಲ್ಲಿ ತೆಗೆದಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-11 ನ್ನು ನೀಡುವ ಅರ್ಹತೆ ಇಲ್ಲ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಕೋರಿಕೆ ಮೇರೆಗೆ ಸುಳ್ಳು ದಾಖಲೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ